KAKD520012712023

**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ವಿರಾಜಪೇಟೆ</u>**

**ಉಪಸ್ಥಿತರುಃ ವಿಶ್ವನಾಥ್ ಎ.,** ಬಿ.ಬಿ.ಎ., ಎಲ್.ಎಲ್.ಬಿ.,
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ., ವಿರಾಜಪೇಟೆ..**

**ದಿನಾಂಕ 04 ನೇ ಜುಲೈ 2026**

**<u>ಸಿ.ಸಿ.ಸಂಖ್ಯೆಃ 657/2023</u>**

ರಾಜ್ಯ, ಪರವಾಗಿ ವಿರಾಜಪೇಟೆ ನಗರ ಪೊಲೀಸ್ ಠಾಣೆ,
ವಿರಾಜಪೇಟೆ ತಾಲ್ಲೂಕು.

... ಪಿರ್ಯಾದುದಾರರು

**(ಪ್ರತಿನಿಧಿಸಿದವರು - ಚೈತ್ರಾ.ಎಂ.ಜಿ, ಸಹಾಯಕ ಸರ್ಕಾರಿ ಅಭಿಯೋಜಕರು)**

**-: ವಿರುದ್ಧ :-**

ಟಿ.ಹೆಚ್.ರಜಾಕ್,
ವಯಸ್ಸು ಸುಮಾರು 46 ವರ್ಷ,
ಬಿನ್ಃಟಿ.ಹಸ್ಸೆನಾರ್,
ವಾಸಃ 1 ನೇ ಸ್ಟೇಜ್,
ವಿಜಯನಗರ,
ವಿರಾಜಪೇಟೆ.

... ಆರೋಪಿ

**(ಪ್ರತಿನಿಧಿಸಿದವರು - ಶ್ರೀ ಎ.ಎಂ.ಲೋಹಿತ್, ವಕೀಲರು)**

| | | |
|---|---|---|
| 1 | ಅಪರಾಧ ನಡೆದ ದಿನಾಂಕ | 15.06.2023 |
| 2 | ಅಪರಾಧ ವರದಿಯಾದ ದಿನಾಂಕ | 16.06.2023 |
| 3 | ಚಾರ್ಜ್ ಶೀಟ್ ಅನ್ನು ಸಲ್ಲಿಸಿದ ದಿನಾಂಕ | 08.08.2023 |
| 4 | ಆರೋಪಿತರನ್ನು ಬಂಧಿಸಿದ ದಿನಾಂಕ | -- |
| 5 | ಪಿರ್ಯಾದಿಯ ಹೆಸರು | ಎನ್.ಕೆ.ಅಬ್ದುಲ್ ರೆಹಮಾನ್ |
| 6 | ಸಾಕ್ಷಿ ವಿಚಾರಣೆ ಪ್ರಾರಂಭಿಸಿದ | 23.06.2026 |

| | | |
|---|---|---|
| | ದಿನಾಂಕ | |
| 7 | ಸಾಕ್ಷಿ ವಿಚಾರಣೆ ಮುಕ್ತಾಯದ ದಿನಾಂಕ | 23.06.2026 |
| 8 | ಆರೋಪಿಸಲಾದ ಅಪರಾಧಗಳು | ಭಾ.ದಂ.ಸಂ.ಕಲಂ 324 ಮತ್ತು 506 |
| 9 | ತೀರ್ಪು ಘೋಷಣೆಯ ದಿನಾಂಕಃ | 04.07.2026 |
| 10 | ನ್ಯಾಯಾಧೀಶರ ಅಭಿಪ್ರಾಯ | ಆರೋಪಿಯನ್ನು ದೋಷಮುಕ್ತಗೊಳಿಸಲಾಗಿದೆ. |

VISHWANATH AMARNATH Digitally signed by VISHWANATH AMARNATH Date: 2026.07.09 18:27:44 +0530

**(ವಿಶ್ವನಾಥ್ ಎ.)**
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ವಿರಾಜಪೇಟೆ.

**-: ತೀರ್ಪು :-**

ಆರೋಪಿಯು ಭಾರತ ದಂಡ ಸಂಹಿತೆ ಕಲಂ 324 ಮತ್ತು 506 ರ ಅಡಿಯಲ್ಲಿ ಕೃತ್ಯವೆಸಗಿದ್ದಾರೆಂದು ಆರೋಪಿಸಿ ವಿರಾಜಪೇಟೆ ನಗರ ಪೊಲೀಸರು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

**2.** ಅಭಿಯೋಜನೆಯ ಪ್ರಕರಣದ ಸಂಕ್ಷಿಪ್ತ ಸಾರಾಂಶ ಏನೆಂದರೆ, ದಿನಾಂಕಃ 15.06.2023 ರಂದು ರಾತ್ರಿ 10.00 ರ ಸಮಯದಲ್ಲಿ ವಿರಾಜಪೇಟೆ ನಗರ ಪೊಲೀಸ್ ಠಾಣಾ ವ್ಯಾಪ್ತಿಯ, ವಿರಾಜಪೇಟೆ ನಗರದ ಮಟನ್ ಮಾರ್ಕೆಟ್ ಜಂಕ್ಷನ್ ಮುಂದೆ ಮೋರಿಯ ಹತ್ತಿರ ಚಾಸಾ1-ಎನ್.ಕೆ.ಅಬ್ದುಲ್ ರೆಹಮಾನ್‌ರವರು ಮನೆಯ ಮುಂದಿನ ಖಾಲಿ ಜಾಗದಲ್ಲಿ ನಿಂತುಕೊಂಡಿದ್ದಾಗ, ಅಲ್ಲಿಗೆ ಬಂದ ಆರೋಪಿಯು ಚಾಸಾ1 ರವರಿಗೆ ನೀಡಿದ ಹಣದ ವಿಚಾರದಲ್ಲಿ, ಚಾಸಾ1 ರವರೊಂದಿಗೆ ನೀನು ನನಗೆ ಹಣ ಕೊಡೋದಿಲ್ವ ಎಂದು ಹೇಳಿ ಹೊಟ್ಟೆಯ ಭಾಗಕ್ಕೆ ಹೊಡೆದು ಕೊಲೆ ಬೆದರಿಕೆ ಹಾಕಿ ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿರುತ್ತಾರೆಂದು, ಈ ರೀತಿ ಆರೋಪಿಯು ಭಾರತ ದಂಡ ಸಂಹಿತೆ ಕಲಂ 324 ಮತ್ತು 506 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧಗಳನ್ನು ಮಾಡಿರುವುದಾಗಿ ಪ್ರಕರಣ ದಾಖಲಾಗಿರುತ್ತದೆ.

**3.** ಪ್ರಕರಣದ ಸಮನ್ಸ್ ಜಾರಿಯಾದ ನಂತರ ಆರೋಪಿಯು ತಮ್ಮ ವಕೀಲರ ಮೂಲಕ ಹಾಜರಾಗಿ ಜಾಮೀನಿನ ಮೇಲೆ ಬಿಡುಗಡೆ ಹೊಂದಿರುತ್ತಾರೆ. ಆರೋಪಿಗೆ ದೋಷಾರೋಪಣಾ ಪಟ್ಟಿಯ ದಾಖಲೆಗಳನ್ನು ಒದಗಿಸಲಾಗಿ, ಅಭಿಯೋಜನೆ ಮತ್ತು ಆರೋಪಿಯ ವಾದವನ್ನು ಆಲಿಸಿದ ನಂತರ ಆರೋಪಿಗೆ ದೋಷಾರೋಪಣೆಯನ್ನು ಓದಿ ಹೇಳಿದ್ದು, ಅವರು ಸದರಿ ಆರೋಪಗಳನ್ನು ಅಲ್ಲಗಳೆದು ವಿಚಾರಣೆಯನ್ನು ಬಯಸಿರುತ್ತಾರೆ.

**4.** ಆರೋಪಿಯ ಮೇಲಿನ ಆರೋಪಗಳನ್ನು ರುಜುವಾತುಪಡಿಸುವ ಸಲುವಾಗಿ ಅಭಿಯೋಜಕರು ಚಾಸಾ-1 ರವರನ್ನು ಪ್ರಾಸಾ-1 ರಂತೆ ಸಾಕ್ಷಿಯ ಹೇಳಿಕೆಯನ್ನು ಪಡೆದಿದ್ದು, ನಿಪಿ-1 ರಿಂದ ನಿಪಿ-7 ರ ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ. ಪ್ರಸ್ತುತ ಪ್ರಕರಣದಲ್ಲಿ ಪ್ರಮುಖ ಸಾಕ್ಷಿಯಾದ ಪ್ರಾಸಾ-1 ರವರು ಅಭಿಯೋಜನೆಗೆ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿದ್ದು, ಅಭಿಯೋಜನೆಯವರು ಸದರಿ ಸಾಕ್ಷಿಯನ್ನು ಪಾಟೀ ಸವಾಲಿಗೆ ಒಳಪಡಿಸಿರೂ ಸಹ ಯಾವುದೇ ಪೂರಕ ಉತ್ತರಗಳನ್ನು ಪಡೆದಿರುವುದಿಲ್ಲ. ಈ ಕಾರಣಕ್ಕಾಗಿ ಅಭಿಯೋಜನೆಯ ಪರ ಉಳಿದ ಸಾಕ್ಷಿಯ ಹೇಳಿಕೆಯನ್ನು ಪಡೆಯುವ ಬಗೆಗಿನ ಅಭಿಯೋಜನೆಯ ಮನವಿಯನ್ನು ತಿರಸ್ಕರಿಸಿ ಉಳಿದ ಸಾಕ್ಷಿಗಳ ಹೇಳಿಕೆ ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**5.** ಪ್ರಸ್ತುತ ವಿಚಾರಣೆಯಲ್ಲಿ ಆರೋಪಿಗೆ ವಿರುದ್ಧವಾದ ಸಾಕ್ಷ್ಯಗಳು ಕಂಡುಬರದಿದ್ದ ಕಾರಣ, ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರ ಅಡಿಯಲ್ಲಿ ಆರೋಪಿಯ ವಿಚಾರಣೆಯನ್ನು ಕೈಬಿಡಲಾಗಿದೆ.

**6.** ಉಭಯ ಪಕ್ಷಕಾರರ ವಾದ-ವಿವಾದಗಳನ್ನು ಆಲಿಸಲಾಯಿತು. ಈ ಪ್ರಕರಣದಲ್ಲಿ ನ್ಯಾಯಾಲಯದ ಪರಿಗಣನೆಗೆ ಉದ್ಭವಿಸುವ ವಿವಾದಾಂಶವೇನೆಂದರೆ:-

1) ದಿನಾಂಕ 15.06.2023 ರಂದು ರಾತ್ರಿ 10.00 ಗಂಟೆಗೆ ವಿರಾಜಪೇಟೆ ನಗರ ಪೊಲೀಸ್ ಠಾಣಾ ವ್ಯಾಪ್ತಿಯ, ವಿರಾಜಪೇಟೆ ನಗರದ ಮಟನ್ ಮಾರ್ಕೆಟ್ ಜಂಕ್ಷನ್ ಮುಂದೆ ಮೋರಿಯ ಹತ್ತಿರ ಚಾಸಾ-1 ರವರ ಮನೆಯ ಮುಂದಿನ ಖಾಲಿ ಜಾಗದಲ್ಲಿ ನಿಂತುಕೊಂಡಿದ್ದಾಗ ಅಲ್ಲಿಗೆ

ಬಂದ ಆರೋಪಿಯು ಈ ಹಿಂದೆ ಚಾಸಾ-1 ರವರಿಗೆ ನೀಡಿದ ಹಣದ ವಿಚಾರದಲ್ಲಿ ಚಾಸಾ-1 ರವರೊಂದಿಗೆ ನೀನು ನನಗೆ ಹಣ ಕೊಡೋದಿಲ್ವ ಎಂದು ಹೇಳಿ ಆರೋಪಿಯು ಒಂದು ಲಾಠಿಯಂತಿರುವ ಒಂದು ಕಾಡು ಮರದ ದೊಣ್ಣೆಯಿಂದ ಚಾಸಾ-1 ರವರ ಎಡಕಾಲಿನ ಮಂಡಿಯ ಕೆಳಗೆ ಹಾಗೂ ಹೊಟ್ಟೆಯ ಭಾಗಕ್ಕೆ ಹೊಡೆದು ಸಾಮಾನ್ಯ ಸ್ವರೂಪದ ಗಾಯನೋವುಂಟು ಪಡಿಸಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 324 ರಡಿಯಲ್ಲಿ ಅಪರಾಧವೆಸಗಿರುತ್ತಾರೆಂದು ಅಭಿಯೋಜನೆ ನಿಸ್ಸಂಶಯವಾಗಿ ರುಜುವಾತುಪಡಿಸುತ್ತದೆಯೇ?

2) ಸದರಿ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯು ಕೃತ್ಯವನ್ನು ಮುಂದುವರೆಸುತ್ತಾ ಚಾಸಾ-1 ರವರಿಗೆ ಕಾಡು ಮರದ ದೊಣ್ಣೆಯಿಂದ ಎಡಕಾಲಿನ ಮಂಡಿಯ ಕೆಳಗೆ ಹಾಗೂ ಹೊಟ್ಟೆಯ ಭಾಗಕ್ಕೆ ಹೊಡೆದು ಕೊಲೆ ಬೆದರಿಕೆ ಹಾಕಿ, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 506 ರಡಿಯಲ್ಲಿ ಅಪರಾಧವೆಸಗಿರುತ್ತಾರೆಂದು ಅಭಿಯೋಜನೆ ನಿಸ್ಸಂಶಯವಾಗಿ ರುಜುವಾತುಪಡಿಸುತ್ತದೆಯೇ?

3) ಯಾವ ಆದೇಶ?

**7.** ಮೇಲ್ಕಂಡ ಅಂಶಗಳಿಗೆ ಈ ನ್ಯಾಯಾಲಯದ ಉತ್ತರ ಈ ರೀತಿ ಇದೆ:-

| | | |
|---|---|---|
| ಅಂಶ-1 | : | **ನಕಾರಾತ್ಮಕವಾಗಿ** |
| ಅಂಶ-2 | : | **ನಕಾರಾತ್ಮಕವಾಗಿ** |
| ಅಂಶ-3 | : | ಅಂತಿಮ ಆದೇಶದ ಮೇರೆಗೆ ಈ ಕೆಳಕಂಡ |

- : **ಕಾರಣಗಳು** :-

**8. ಅಂಶ-1 ಮತ್ತು 2:** ಈ ಅಂಶಗಳು ಒಂದಕ್ಕೊಂದು ಪೂರಕ ಸಂಗತಿಗಳನ್ನು ಒಳಗೊಂಡಿರುವುದರಿಂದ ಪುನರಾವರ್ತನೆಯನ್ನು ತಪ್ಪಿಸಲು ಒಟ್ಟಿಗೆ ಚರ್ಚೆಗೆ ಪರಿಗಣಿಸಲಾಗಿದೆ.

ಪ್ರಸ್ತುತ ಪ್ರಕರಣದಲ್ಲಿ ಆರೋಪಿಯ ವಿರುದ್ಧ ಆರೋಪಗಳು ಏನೆಂದರೆ ದಿನಾಂಕ: 15.06.2023 ರಂದು ರಾತ್ರಿ 10.00 ಗಂಟೆಯ ಸಮಯದಲ್ಲಿ ವಿರಾಜಪೇಟೆ ನಗರ ಪೊಲೀಸ್ ಠಾಣಾ ವ್ಯಾಪ್ತಿಯ, ವಿರಾಜಪೇಟೆ ನಗರದ ಮಟನ್

ಮಾರ್ಕೆಟ್ ಜಂಕ್ಷನ್ ಮುಂದೆ ಮೋರಿಯ ಹತ್ತಿರ ಚಾಸಾ1-ಎನ್.ಕೆ.ಅಬ್ದುಲ್ ರೆಹಮಾನ್‌ರವರು ಮನೆಯ ಮುಂದಿನ ಖಾಲಿ ಜಾಗದಲ್ಲಿ ನಿಂತುಕೊಂಡಿದ್ದಾಗ, ಅಲ್ಲಿಗೆ ಬಂದ ಆರೋಪಿಯು ಚಾಸಾ1 ರವರಿಗೆ ನೀಡಿದ ಹಣದ ವಿಚಾರದಲ್ಲಿ, ಚಾಸಾ1 ರವರೊಂದಿಗೆ ನೀನು ನನಗೆ ಹಣ ಕೊಡೋದಿಲ್ವ ಎಂದು ಹೇಳಿ ಕಾಡು ಮರದ ದೊಣ್ಣೆಯಿಂದ ಎಡಕಾಲಿನ ಮಂಡಿಯ ಕೆಳಗೆ ಹಾಗೂ ಹೊಟ್ಟೆಯ ಭಾಗಕ್ಕೆ ಹೊಡೆದು ಕೊಲೆ ಬೆದರಿಕೆ ಹಾಕಿ ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿರುತ್ತಾರೆಂದು ಅಭಿಯೋಜನೆಯು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುವುದಾಗಿದೆ.

**9.** ಮೇಲಿನ ಆರೋಪವನ್ನು ರುಜುವಾತುಪಡಿಸುವ ಸಲುವಾಗಿ ಅಭಿಯೋಜನೆಯು ಪಿರ್ಯಾದಿಯಾದ ಚಾಸಾ-1 ಎನ್.ಕೆ.ಅಬ್ದುಲ್ ರೆಹಮಾನ್ ರವರನ್ನು ಪ್ರಾಸಾ-1 ಎಂದು ವಿಚಾರಣೆಗೆ ಒಳಪಡಿಸಿದ್ದು, ಪ್ರಾಸಾ-1 ರವರು ನಿಪಿ-1 ರಂತೆ ಗುರುತಾದ ಹೇಳಿಕೆ, ನಿಪಿ-2 ರ ಮಹಜರು, ನಿಪಿ-3 ರಿಂದ 5 ಛಾಯಾಚಿತ್ರ, ನಿಪಿ-6- 65 ಬಿ ಪ್ರಮಾಣ ಪತ್ರವನ್ನು ಗುರುತಿಸಿರುತ್ತಾರೆ ಹಾಗೂ ನಿಪಿ-1 ಮತ್ತು 2 ರಲ್ಲಿನ ತಮ್ಮ ಸಹಿಗಳನ್ನು ಸಹ ಗುರುತಿಸಿರುತ್ತಾರೆ. ಆದರೆ ಪ್ರಾಸಾ-1 ರವರು ತಮ್ಮ ಸಾಕ್ಷ್ಯದಲ್ಲಿ 2 ವರ್ಷದ ಹಿಂದೆ ತಾನು ವಿರಾಜಪೇಟೆ ನಗರದ ಮಟನ್ ಮಾರ್ಕೆಟ್ ಬಳಿ ಬಿದ್ದು ಪೆಟ್ಟು ಮಾಡಿಕೊಂಡ ಕಾರಣ ವಿರಾಜಪೇಟೆ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಗ ಪೋಲಿಸರು ಅವರ ಸಹಿಗಳನ್ನು ಪಡೆದು ಅದಾದ ಸ್ವಲ್ಪ ದಿನದ ನಂತರ ಅವರು ಬಿದ್ದಿದ್ದ ಸ್ಥಳಕ್ಕೆ ಬಂದು ಪೋಟೋಗಳನ್ನು ತೆಗೆದಿರುತ್ತಾರೆ. ಯಾವ ವಿಚಾರಕ್ಕೆ ಅವರ ಸಹಿಗಳನ್ನು ಪಡೆದು ಪೋಟೋಗಳನ್ನು ತೆಗೆದಿದ್ದಾರೆ ಎಂದು ಅವರಿಗೆ ಗೊತ್ತಿಲ್ಲ. ಅವರು ಆರೋಪಿಯ ವಿರುದ್ದ ದೂರು ಕೊಟ್ಟಿಲ್ಲ ಹಾಗೂ ಪೋಲಿಸರಿಗೆ ಯಾವುದೇ ಸ್ಥಳ ತೋರಿಸಿಲ್ಲ. ಪೋಲಿಸರು ತನ್ನ ಸಮಕ್ಷಮ ಯಾವುದೇ ವಸ್ತುವನ್ನು ವಶಕ್ಕೆ ಪಡೆದಿಲ್ಲ. ನಿಪಿ-1 ಮತ್ತು 2 ರಲ್ಲಿ ಬರೆದಿರುವ ವಿಚಾರ ತನಗೆ ಗೊತ್ತಿಲ್ಲ. ಅವರಿಗೆ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎಂದು ನುಡಿಯುವ ಮೂಲಕ ಅಭಿಯೋಜನೆಗೆ ಪ್ರತಿಕೂಲ ಸಾಕ್ಷಿಯಾಗಿರುತ್ತಾರೆ. ಪ್ರಾಸಾ-1 ರವರನ್ನು ಪ್ರಾಜ್ಞ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಪಾಟೀ ಸವಾಲಿಗೆ ಒಳಪಡಿಸಿದರೂ ಸಹ ಆರೋಪಿಯ ಮೇಲೆ ಮಾಡಿರುವ ಆರೋಪಗಳನ್ನು ರುಜುವಾತುಪಡಿಸಲು ಯಾವುದೇ ಪೂರಕ ಅಂಶಗಳನ್ನು ಪಡೆದಿರುವುದಿಲ್ಲ.

**10.** ಪ್ರಾಸಾ-1 ರವರನ್ನು ಅಭಿಯೋಜನೆಯವರು ಪ್ರಸ್ತುತ ಪ್ರಕರಣದ ಪ್ರಮುಖ ಸಾಕ್ಷ್ಯವೆಂದು ವಿಚಾರಣೆಗೆ ಒಳಪಡಿಸಿದ್ದು, ಸದರಿಯವರು ಅಭಿಯೋಜನೆಗೆ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿರುತ್ತಾರೆ. ಪ್ರಾಸಾ-1 ರವರನ್ನು ಅಭಿಯೋಜನೆಯು ಪಾಟೀ ಸವಾಲಿಗೆ ಒಳಪಡಿಸಿ ನಿಪಿ-1 ರ ದೂರು ಹೇಳಿಕೆ ಮತ್ತು ನಿಪಿ-7 ರ ಹೇಳಿಕೆಯ ಭಾಗವನ್ನು ಉಪಯೋಗಿಸಿಕೊಂಡರೂ ಸಹ, ಸದರಿ ಸಾಕ್ಷಿಯು ಪ್ರಾಜ್ಞ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸೂಚಿಸಿದ ಎಲ್ಲಾ ಅಂಶಗಳನ್ನು ಅಲ್ಲಗಳೆದಿರುತ್ತಾರೆ. ಮೇಲ್ಕಂಡ ಪ್ರಾಸಾ-1 ರವರ ಸಾಕ್ಷ್ಯದಲ್ಲಿ ಅಭಿಯೋಜನೆಯು ದೋಷಾರೋಪಿಸಿರುವಂತೆ ಆರೋಪಿಯು ಅಪರಾಧಿಕ ಕೃತ್ಯ ಎಸಗಿರುವ ಬಗ್ಗೆ ಯಾವುದೇ ಸಾಕ್ಷ್ಯಧಾರಗಳು ಕಂಡುಬಂದಿಲ್ಲದೆ ಇರುವುದರಿಂದ ಅಭಿಯೋಜನೆಯ ಪರ ಉಳಿದ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದರೂ ಸಹ ಆರೋಪಿಯ ವಿರುದ್ಧ ಆರೋಪಿಸಲಾದ ಅಪರಾಧ ಕೃತ್ಯಗಳನ್ನು ಸಾಭೀತುಪಡಿಸುವ ಸಾಧ್ಯತೆಗಳು ಇಲ್ಲದೆ ಇರುವುದರಿಂದ ಅಭಿಯೋಜನೆಯ ಮನವಿಯನ್ನು ತಿರಸ್ಕರಿಸಿದ್ದು ಉಳಿದ ಅಭಿಯೋಜನೆ ಸಾಕ್ಷ್ಯಗಳನ್ನು ಪಡೆಯಲಾಗಿರುವುದಿಲ್ಲ.

**11.** ಮೇಲಿನ ಎಲ್ಲಾ ಅಂಶಗಳು ಹಾಗೂ ಸಾಕ್ಷಿದಾರರ ಹೇಳಿಕೆ ಮತ್ತು ದಾಖಲೆಗಳನ್ನು ಎಚ್ಚರಿಕೆಯಿಂದ ಪರಿಶೀಲಿಸಿದಾಗ, ದೋಷಾರೋಪಣಾ ಪಟ್ಟಿಯಲ್ಲಿ ನಮೂದಿಸಿರುವಂತಹ ಅಪರಾಧಗಳನ್ನು ಆರೋಪಿಯು ಎಸಗಿರುತ್ತಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತು ಪಡಿಸಿರುವುದಿಲ್ಲ ಎಂದು ಕಂಡುಬರುತ್ತದೆ. ಆದ್ದರಿಂದ ಅಭಿಯೋಜನೆಯ ಪ್ರಕರಣದಲ್ಲಿನ ಸಂಶಯದ ಲಾಭವನ್ನು ಆರೋಪಿತರಿಗೆ ನೀಡುವ ಮೂಲಕ ಅಂಶ 1 ಮತ್ತು 2 ನ್ನು **ನಕಾರಾತ್ಮಕವಾಗಿ** ಉತ್ತರಿಸಲಾಗಿದೆ.

**12.** **<u>ಅಂಶ-3</u>** ಈ ಮೇಲೆ ಚರ್ಚಿಸಲ್ಪಟ್ಟ ಕಾರಣಗಳಿಗಾಗಿ ಈ ನ್ಯಾಯಾಲಯವು ಕೆಳಕಂಡಂತೆ ಆದೇಶಿಸಿರುತ್ತದೆ.

**-:<u>ಆದೇಶ :</u>-**

**ಆರೋಪಿಯನ್ನು ಭಾರತೀಯ ದಂಡ ಸಂಹಿತೆ ಕಲಂ 324 ಮತ್ತು 506 ರ ಅಡಿಯಲ್ಲಿ ಮಾಡಲಾದ**

**ಆರೋಪಣೆಗಳಿಂದ ನಿರ್ದೋಷಿ ಎಂದು ತೀರ್ಮಾನಿಸಿ ದೋಷಮುಕ್ತಗೊಳಿಸಲಾಗಿದೆ.**

**ಆರೋಪಿಯು ಮತ್ತು ಜಾಮೀನುದಾರರ ಜಾಮೀನು ಬಾಂಡ್ ಗಳನ್ನು ರದ್ದುಪಡಿಸಲಾಗಿದೆ.**

**ಆರೋಪಿಯು ಮತ್ತು ಅವರ ಜಾಮೀನುದಾರರು ದಂಡ ಪ್ರಕ್ರಿಯಾ ಸಂಹಿತೆ 437-ಎ ರ ಅಡಿಯಲ್ಲಿ ಬರೆದುಕೊಟ್ಟ ಬಾಂಡ್‌ಗಳು ಇಂದಿನಿಂದ ಆರು ತಿಂಗಳವರೆಗೆ ಚಾಲ್ತಿಯಲ್ಲಿರತಕ್ಕದ್ದು.**

**ಸ್ವತ್ತು ಪಟ್ಟಿ ಸಂಖ್ಯೆ: 92/2023 ರಡಿ ಹಾಜರುಪಡಿಸಲಾಗಿರುವ ದೊಣ್ಣೆಯು ಅನುಪಯುಕ್ತ ವಸ್ತುವಾದ್ದರಿಂದ ಅದನ್ನು ಮೇಲ್ಮನವಿ ಅವಧಿ ಮುಗಿದ ನಂತರ ನಾಶಗೊಳಿಸಲು ಆದೇಶಿಸಲಾಗಿದೆ.**

*(ಶೀಘ್ರಲಿಪಿಗಾರಳಿಗೆ ಉಕ್ತಲೇಖನ ನೀಡಿದ್ದು, ಅವರು ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿದ್ದು, ತಪ್ಪುಗಳನ್ನು ತಿದ್ದುಪಡಿ ಮಾಡಿದ ನಂತರ ದಿನಾಂಕ:* **04 ನೇ ಜುಲೈ 2026** *ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)*

VISHWANATH AMARNATH
Digitally signed by VISHWANATH AMARNATH
Date: 2026.07.09 18:27:53 +0530

**(ವಿಶ್ವನಾಥ್ ಎ.)**
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ವಿರಾಜಪೇಟೆ.

## ಅನುಬಂಧ

**ಅಭಿಯೋಜನೆ ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿಗಳ ಪಟ್ಟಿ:-**

ಪ್ರಾಸಾ-1 : ಅಬ್ದುಲ್ ರೆಹಮಾನ್

**ಅಭಿಯೋಜನೆ ಪರ ಗುರುತು ಮಾಡಲ್ಪಟ್ಟ ನಿಶಾನೆಗಳು:-**

ನಿಪಿ-1 **:** ಹೇಳಿಕೆ

ನಿಪಿ-1(ಎ) **:** ಪಾಸಾ-1 ರವರ ಸಹಿ

ನಿಪಿ-2 **:** ಮಹಜರು

ನಿಪಿ-2(ಎ) **:** ಪಾಸಾ-1 ರವರ ಸಹಿ

| | | |
|---|---|---|
| ನಿಪಿ-3-5 | : | ಛಾಯಾಚಿತ್ರಗಳು |
| ನಿಪಿ-6 | : | 65-ಬಿ ರಡಿಯಲ್ಲಿನ ಪ್ರಮಾಣ ಪತ್ರ |
| ನಿಪಿ-7 | : | ಪ್ರಾಸಾ-1 ರವರ ಹೇಳಿಕೆ |

**ಅಭಿಯೋಜನೆ ಪರ ಗುರುತು ಮಾಡಲ್ಪಟ್ಟ ಮುದ್ದೆ ಮಾಲುಗಳು:-**

- ಇಲ್ಲ -

**ಅಭಿಯೋಜನೆ ಪರ ವಿಚಾರಣೆಯಾದ ಸಾಕ್ಷಿಗಳು:-**

- ಇಲ್ಲ -

**ಆರೋಪಿತರ ಪರ ಗುರುತು ಮಾಡಲ್ಪಟ್ಟ ನಿಶಾನೆಗಳು:-**

- ಇಲ್ಲ -

VISHWANATH AMARNATH
Digitally signed by VISHWANATH AMARNATH
Date: 2026.07.09 18:27:58 +0530

**(ವಿಶ್ವನಾಥ್ ಎ.)**
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ವಿರಾಜಪೇಟೆ.

*M.C.T

Visit ecourts.gov.in for updates or download mobile app “eCourts Services” from Android or iOS